ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ: DEPARTMENT / SUBJECT: ರಾಜ್ಯಪಾಲರು

ಪತ್ರಿಕೆಯ ಹೆಸರು : NAME OF THE NEWS PAPER : ಕನ್ನಡ ಪ್ರಭ        ದಿನಾಂಕ : DATE : 7/7/19

# ವಿಶ್ವಾಸಮತ ಯಾಚಿಸಲು ರಾಜ್ಯಪಾಲ ಸೂಚಿಸ್ತಾರಾ?

## ವಜುಭಾಯಿ ವಾಲಾ ಮುಂದಿನ ಕ್ರಮ ಏನಿರಬಹುದು?

7/7/19



• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಆಡಳಿತಾರೂಢ ಪಕ್ಷಗಳ ಶಾಸಕರ ರಾಜೀನಾಮೆ ಪರ್ವ ಮುಂದುವರೆದಂತೆ ರಾಜ್ಯಪಾಲರ ಪಾತ್ರ ಮಹತ್ವದ್ದಾಗಿ ಪರಿಣಮಿಸಲಿದೆ. ಶಾಸಕರ ರಾಜೀನಾಮೆ ಅಂಗೀಕಾರಗೊಳ್ಳದೆ ವಿಳಂಬವಾದಲ್ಲಿ ಅಥವಾ ಹೈಡ್ರಾಮಾಗಳು ನಡೆದಲ್ಲಿ ಆಗ ರಾಜ್ಯಪಾಲರು ಮಧ್ಯೆ ಪ್ರವೇಶ ಮಾಡುವುದು ನಿಶ್ಚಿತ. ಶನಿವಾರ ರಾಜೀನಾಮೆ ನೀಡಿರುವ 12 ಶಾಸಕರು ಮತ್ತು ಹಿಂದೆ ನೀಡಿದ ಆನಂದ್ ಸಿಂಗ್ ಅವರ ರಾಜೀನಾಮೆ ಪತ್ರಗಳ ಬಗ್ಗೆ ಸ್ಪೀಕರ್ ಯಾವ ತೀರ್ಮಾನ ಕೈಗೊಳ್ಳುತ್ತಾರೆ ಎಂಬುದನ್ನು ರಾಜ್ಯಪಾಲ ವಜುಭಾಯಿ ವಾಲಾ ಅವರು ಕಾದು ನೋಡಬಹುದು. ಮಂಗಳವಾರ ತಾವು ಶಾಸಕರ ರಾಜೀನಾಮೆ ಪತ್ರಗಳನ್ನು ಪರಿಶೀಲಿಸುವುದಾಗಿ ಸ್ಪೀಕರ್ ರಮೇಶ್‌ಕುಮಾರ್ ಅವರು ಹೇಳಿರುವುದರಿಂದ ಅಲ್ಲಿವರೆಗೆ ಕಾದು ನೋಡಬಹುದು. ಇದನ್ನು ಪ್ರತಿಪಕ್ಷ ಬಿಜೆಪಿ ಕೂಡ ಕಾದು ನೋಡುತ್ತಿದೆ. ↘ 15

## ವಿಸರ್ಜನೆಗೆ ರಾಜ್ಯಪಾಲರ ಒಪ್ಪಿಗೆ ಡೌಟು?

ಬೆಂಗಳೂರು: ಜೆಡಿಎಸ್–ಕಾಂಗ್ರೆಸ್ ಒಮ್ಮತಕ್ಕೆ ಬಂದು ವಿಧಾನಸಭೆ ವಿಸರ್ಜನೆಗೆ ಶಿಫಾರಸು ಮಾಡಿದರೆ ಅದನ್ನು ರಾಜ್ಯಪಾಲರು ತಿರಸ್ಕರಿಸುವ ಸಾಧ್ಯತೆ ಇದೆ. ಅಲ್ಪಮತದ ಸರ್ಕಾರ ಇಂತಹ ಶಿಫಾರಸು ಮಾಡುವಂತಿಲ್ಲ ಎಂಬ ಕಾರಣ ಮುಂದೊಡ್ಡುವ ಸಾಧ್ಯತೆ ಇದೆ. ವಿವರ ↘ 6

# ವಿಶ್ವಾಸಮತಕ್ಕೆ ಗವರ್ನರ್ ಸೂಚಿಸುತ್ತಾರಾ?

ಕ.ಪ್ರ 7/7/19

↙ ಮೊದಲ ಪುಟದಿಂದ

ಸ್ಪೀಕರ್ ಅವರು ರಾಜೀನಾಮೆ ಅಂಗೀಕರಿಸುವುದನ್ನು ವಿಳಂಬ ಮಾಡುವ ಸಾಧ್ಯತೆ ಕಂಡು ಬಂದರೆ ಸಹಜವಾಗಿ ಪ್ರತಿಪಕ್ಷ ಬಿಜೆಪಿ ರಾಜ್ಯಪಾಲರ ಮೊರೆ ಹೋಗುವ ಸಂಭವವಿದೆ. ಹಾಗಾದಾಗ ರಾಜ್ಯಪಾಲರು ತಮ್ಮನ್ನೂ ಶಾಸಕರು ಭೇಟಿ ಮಾಡಿ ರಾಜೀನಾಮೆ ಪ್ರತಿಯನ್ನು ನೀಡಿರುವುದರಿಂದ ಈ ಕುರಿತು ಸ್ಪೀಕರ್ ಅವರನ್ನು ವಿಚಾರಿಸಬಹುದು. ಆಗಲೂ ಪ್ರಯೋಜನವಾಗದಿದ್ದರೆ ಬಿಜೆಪಿ ದೂರು ನೀಡಿದಲ್ಲಿ ಇದೇ ತಿಂಗಳ 12ರಿಂದ ವಿಧಾನಮಂಡಲದ ಅಧಿವೇಶನ ಆರಂಭವಾಗುವುದರಿಂದ ಮೊದಲ ದಿನವೇ ವಿಶ್ವಾಸಮತ ಯಾಚಿಸಿ ಬಹುಮತ ಸಾಬೀತುಪಡಿಸುವಂತೆ ರಾಜ್ಯಪಾಲರು ಮುಖ್ಯಮಂತ್ರಿಗಳಿಗೇ ಸೂಚಿಸಬಹುದು ಎಂದು ತಿಳಿದು ಬಂದಿದೆ. ಒಂದು ವೇಳೆ ಪರಿಸ್ಥಿತಿ ತೀರಾ ಗೊಂದಲಮಯವಾದಲ್ಲಿ ರಾಷ್ಟ್ರಪತಿ ಆಳ್ವಿಕೆ ಹೇರುವಂತೆ ಕೇಂದ್ರ ಗೃಹ ಸಚಿವಾಲಯಕ್ಕೆ ಶಿಫಾರಸು ಮಾಡುವ ಅವಕಾಶವೂ ರಾಜ್ಯಪಾಲರ ಮುಂದಿರುತ್ತದೆ.